ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಆರ್.ಐ.ಡಿ.ಎಫ್. 3 ಯೋಜನೆಯಡಿಯಲ್ಲಿ ಕೊಪ್ಪ-ಎನ್.ಇ. ಆಯಿಲ್ ಪ್ಲಾಂಟೇಷನ್ ರಸ್ತೆ ಹಾಗೂ ಹಿಟ್ಟಿ ಹೆಬ್ಬಾಗಿಲು-ಕಲ್ಕರೆ-ಮಾಕೋರು ರಸ್ತೆಗಳನ್ನು ಡಾಂಬರೀಕರಣಕ್ಕೆ ಆಯ್ಕೆ ಮಾಡಲಾಗಿದ್ದು ಸದರಿ ರಸ್ತೆಗಳಲ್ಲಿ ಕಾಮಗಾರಿ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬಂದಿದ್ದಲ್ಲಿ, ಕಾಮಗಾರಿಗಳನ್ನು ಮಾಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

3. ಸದರಿ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಲಾಗುವ ತಿಂಗಳುಗಳೆಷ್ಟು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಬಂದಿದೆ.

2. ಈ ಕಾಮಗಾರಿಗಳು ಎಂಎಡಿಬಿ ಅಡಿಯಲ್ಲಿ ಅನುಮೋದನೆಯಾಗಿದ್ದು ಕಾಮಗಾರಿ ಪ್ರಾರಂಭಿಸುವ ಹಂತದಲ್ಲಿ ಭಾರಿ ಮಳೆಯಿಂದ ಅನುಮೋದಿತ ರಸ್ತೆಯ ಭಾಗದ ಕೆಲವು ಸರಪಳಿಗಳಲ್ಲಿ ಹಾನಿ ಉಂಟಾಗಿದ್ದು ಈ ಸರಪಳಿಗಳಲ್ಲಿ ತಾಂತ್ರಿಕವಾಗಿ ಕಾಮಗಾರಿಗಳನ್ನು ನಿರ್ವಹಿಸಲು ಸಾಧ್ಯವಾಗದ ಕಾರಣ ಮಾರ್ಪಾಡಿತ ಅಂದಾಜನ್ನು ಎಂಎಡಿಬಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ನಂತರ ಉಳಿಕೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

3. ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಬಾರ್ಡ್ ಮಾರ್ಚ್ 2002ರವರೆಗೆ ಕಾಲಮಿತಿ ನೀಡಿರುತ್ತದೆ. ಆದರೆ ಮಾರ್ಪಾಡಿತ ಅಂದಾಜಿಗೆ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಬೇಕಿದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯ ಒತ್ತುವರಿ ಮಾಡುವವರ ವಿರುದ್ಧ ಕ್ರಮ ಜರುಗಿಸುವುದು.

ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಒತ್ತುವರಿಯಾಗಿರುವ ಭೂಮಿಗಳ ವಿಸ್ತೀರ್ಣವೆಷ್ಟು?

ಆ) ಈ ಭೂಮಿ ಒತ್ತುವರಿಯಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದ್ದು, ಒತ್ತವರಿದಾರರ ವಿರುದ್ಧ ಯಾವುದೇ ಕ್ರಮ ಜರುಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಇಂತಹ ಪ್ರಸಂಗಗಳು ಮುಂದೆ ನಡೆಯದಂತೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗದಂತೆ ಕೈಗೊಳ್ಳುವ ಕ್ರಮವೇನು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) 6.2 ಹೆಕ್ಟೇರ್

ಆ) ಇಲ್ಲ.

ಇ) ಇನ್ನು ಮುಂದೆ ಅರಣ್ಯ ಜಮೀನು ಅತಿಕ್ರಮಣವಾಗುವುದನ್ನು ತಡೆಯಲು ಸಿಬ್ಬಂದಿಯವರಿಗೆ ಕಟ್ಟನಿಟ್ಟಾದ ಆದೇಶವನ್ನು ನೀಡಲಾಗಿದೆ ಮತ್ತು ಅರಣ್ಯ ಭೂಮಿಯ ಸರಹದ್ದಿನಲ್ಲಿ ಕಂದಕವನ್ನು ತೋಡಿ ಗಡಿ ಗುರ್ತಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇದರಿಂದ ಅತಿಕ್ರಮಣ ಮಾಡುವ ಪ್ರಯತ್ನಗಳಿಗೆ ಅಸ್ಪದವಾಗುವುದಿಲ್ಲ.

ದೇವು ಷುಗರ್ಸ್ ಪುನರಾರಂಭ.

1500 (1901)

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿರುವ ದೇವು ಷುಗರ್ಸ್ ಕಾರ್ಖಾನೆ ಪುನರಾರಂಭ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; ವಿವರ ನೀಡುವುದು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಇಲ್ಲ. ತುಂಗಭದ್ರಾ ಶುಗರ್ಸ್(ದೇವು ಶುಗರ್ಸ್) ಲಿಮಿಟೆಡ್ (ಉದ್ಯಮಗಳ